ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಕೃಷ್ಣ-ತುಂಗ ಆವರಣ, ಮಂತ್ರಾಲಯ ರಸ್ತೆ (ಎನ್.ಹೆಚ್. 167), ಯರಗೇರಾ-584133, ರಾಯಚೂರು, ಕರ್ನಾಟಕ
ಶೈಕ್ಷಣಿಕ ವಿಭಾಗ
E-mail: registrarrur@gmail.com Website: https://raichuruniversity.ac.in

ಕ್ರ.ಸಂ.ರಾವಿರಾ/ಶೈಕ್ಷಣಿಕವಿಭಾಗ/2023-24/223 ದಿನಾಂಕ: 02.06.2023

# ಸುತ್ತೋಲೆ

ವಿಷಯ: ಯುಯುಸಿಎಂಎಸ್ ತಂತ್ರಾಂಶದ ಮುಖಾಂತರ ಸ್ನಾತಕ ಕೋರ್ಸ್‌ಗಳ ಮೊದಲನೇ ವರ್ಷಕ್ಕೆ ಆನ್‌ಲೈನ್ ಮೂಲಕ 2023-24ನೇ ಸಾಲಿಗೆ ಪ್ರವೇಶ ನೀಡುವ ಕುರಿತು.

ಉಲ್ಲೇಖ:1) Govt. Order No. ED/80/UNE/2023, Bangalore, Date: 23.05.2023.
2) ನಮ್ಮ ಕಚೇರಿ ಪತ್ರ ಸಂ: RUR/ACA/Cale-UG/2023-24/212, dtd: 24.05.2023.

*****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಯಚೂರು ವಿಶ್ವವಿದ್ಯಾಲಯದ ಸಂಯೋಜಿತ (Affiliated) ಕಾಲೇಜುಗಳಲ್ಲಿ 2023-24ನೇ ಶೈಕ್ಷಣಿಕ ವರ್ಷದ ವಿವಿಧ ಸ್ನಾತಕ ಕೋರ್ಸ್‌ಗಳಿಗೆ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ವಿದ್ಯಾರ್ಥಿಗಳು ಯುಯುಸಿಎಂಎಸ್ ತಂತ್ರಾಂಶದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬಹುದಾಗಿದೆ. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಸಂಯೋಜನಾ ಅಧಿಸೂಚನೆಯಲ್ಲಿ ಪ್ರಸ್ತಾವಿಸಿದ ಸ್ನಾತಕ ಕೋರ್ಸ್‌ಗಳು ಮತ್ತು ವಿಷಯಗಳಿಗೆ ಪ್ರವೇಶ ಮಿತಿ ಮೀರದಂತೆ ಮಾತ್ರ 2023-24ನೇ ಸಾಲಿಗೆ ಪ್ರವೇಶ ನೀಡಬಹುದಾಗಿದೆ. ಆದರೆ ಈ ಪ್ರವೇಶಾತಿಯು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

"ರಾಯಚೂರು ವಿಶ್ವವಿದ್ಯಾಲಯದಲ್ಲಿ 2023-24ನೇ ಸಾಲಿನ ಸಂಯೋಜನಾ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಯಾವ ಕಾಲೇಜುಗಳು 2023-24ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ಸರ್ಕಾರದ ವಿಶ್ವವಿದ್ಯಾಲಯದ ನಿಯಮಾವಳಿ-2000 ಪ್ರಕಾರ ಅರ್ಹತೆ ಹೊಂದಿ ಸಂಯೋಜನೆ ಮಂಜೂರಾತಿ ಪಡೆದ ಕಾಲೇಜುಗಳಲ್ಲಿ ಸ್ನಾತಕ ಪ್ರಥಮ ವರ್ಷದ ವಿದ್ಯಾರ್ಥಿಗಳ ಪ್ರವೇಶವನ್ನು ಅಧಿಕೃತವಾಗಿ ಪರಿಗಣಿಸಲಾಗುತ್ತದೆ. ಮುಂದುವರೆದು, 2023-24ನೇ ಸಾಲಿಗೆ ಸಂಯೋಜನೆ ಪಡೆಯಲು ಅನರ್ಹವಾದರೆ ಆ ಕಾಲೇಜುಗಳಲ್ಲಿ ನೀಡಿದ ವಿದ್ಯಾರ್ಥಿಗಳ ಪ್ರವೇಶವನ್ನು ಮಾನ್ಯ ಮಾಡುವುದಿಲ್ಲ ಮತ್ತು ಅಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಬೇರೆ ಸೂಕ್ತ ಕಾಲೇಜುಗಳಿಗೆ ವರ್ಗಾವಣೆ ಪಡೆಯಬೇಕಾಗುತ್ತದೆ".

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಗೆ,
ರಾಯಚೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಸ್ನಾತಕ ಪದವಿಯ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:
1) ಕುಲಸಚಿವರು (ಮೌಲ್ಯಮಾಪನ) ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2) ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4) ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರುಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5) ಮುಖ್ಯಸ್ಥರು, ಕಂಪ್ಯೂಟರ್ ಸೆಂಟರ್, ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು.
6) ಕಚೇರಿ ಪ್ರತಿ.